

# ರಸಬೋಧೆ

ಸ್ವಾಮಿ ಭೂತೇಶಾನಂದ
ಸಂಕಲನ : ಸ್ವಾಮಿ ಋತಾನಂದ
ಅನುವಾದ : ಸ್ವಾಮಿ ಮಂಗಳಾತ್ಮಾನಂದ

◢ **ಸ್ವಾ**ಮಿ ಭೂತೇಶಾನಂದಜಿ ಈ ಕಥೆಯನ್ನು ಹೇಳುತ್ತಿದ್ದರು: ಒಬ್ಬ ಮುದುಕ ಮೃತ್ಯುಶಯ್ಯೆಯಲ್ಲಿ ಮಲಗಿದ್ದ. ಒಂದು ದಿನ ತನ್ನ ಮಕ್ಕಳಿಬ್ಬರನ್ನೂ ಹತ್ತಿರ ಕರೆದು ಹೇಳಿದ, "ಯಾರ್‍ಯಾರು ಎಷ್ಟೆಷ್ಟು ಸಾಲವನ್ನು ನನ್ನಿಂದ ಪಡೆದುಕೊಂಡಿದ್ದಾರೋ, ಅವೆಲ್ಲವನ್ನೂ ನೀವು ಹೋಗಿ ವಸೂಲಿ ಮಾಡಿಕೊಂಡು ಬರಬೇಕು." ಇದನ್ನು ಕೇಳಿ ಮಕ್ಕಳಿಬ್ಬರಿಗೂ ಸಂತೋಷವೋ ಸಂತೋಷ. ಅಣ್ಣನು ತಮ್ಮನ ಕಡೆ ಅರಳಿದ ಕಣ್ಣುಗಳಿಂದ ನೋಡುತ್ತಿದ್ದ. ಆಗ ತಮ್ಮ ಹೇಳಿದ, "ನೋಡಿದಿಯಾ, ಈ ವಯಸ್ಸಿನಲ್ಲಿಯೂ ನಮ್ಮ ತಂದೆಗೆ ಅದೆಂಥ ನೆನಪಿನ ಶಕ್ತಿ!" ಮತ್ತೆ ಸಂಜೆ ತಂದೆ ತನ್ನ ಮಕ್ಕಳಿಬ್ಬರನ್ನೂ ಕರೆಯಿಸಿದ. ಇಬ್ಬರೂ ಬಹಳ ಉತ್ಸಾಹದಿಂದ ತಂದೆಯ ಮುಂದೆ ಹಾಜರಾದರು. ತಂದೆ ನಿಧಾನವಾಗಿ ನೆನಪಿಸಿಕೊಂಡು ಹೇಳಿದ, "ಇಷ್ಟಿಷ್ಟು ಜನರಿಂದ ನಾನು ಸಾಲ ತೆಗೆದುಕೊಂಡಿದ್ದೇನೆ. ಇವುಗಳೆಲ್ಲವನ್ನೂ ನೀವು ತಪ್ಪದೆ ಪಾವತಿಸಬೇಕು." ಅಪ್ಪನ ಮಾತು ಮುಗಿಯುವದರೊಳಗಾಗಿ ತಮ್ಮ ಅಣ್ಣನಿಗೆ ಹೇಳಿದ, **"ಏ ಅಣ್ಣ! ಈಗ ನಿಜವಾಗಿಯೂ ತಂದೆಗೆ ಅರುಳುಮರುಳು ಪ್ರಾರಂಭವಾಗಿದೆ. ತಪ್ಪುತಪ್ಪಾಗಿ ಮಾತನಾಡುತ್ತಿದ್ದಾರೆ."**

◢ **ಒಂ**ದು ಸಲ ಒಬ್ಬ ಮಹಿಳಾ ಭಕ್ತೆ ಭೂತೇಶಾನಂದಜಿಯವರಿಗೆ ಪ್ರಣಾಮ ಮಾಡಿ, "ನನ್ನ ಮಗಳಿಗೆ ಮಂತ್ರದೀಕ್ಷೆ ನೀಡಿ" ಎಂದು ಬೇಡಿಕೊಂಡಳು. ಅದಕ್ಕೆ ಸ್ವಾಮೀಜಿ ಕೇಳಿದರು, "ನಿನಗೆ ದೀಕ್ಷೆ ಆಗಿದೆಯೇ?" ಆಕೆ "ಹೌದು" ಎಂದಳು. "ನಿನ್ನ ಗುರುಗಳ ಹೆಸರೇನು?" ಎಂದು ಸ್ವಾಮೀಜಿ ಕೇಳಿದರು. ಮಹಿಳೆ ಬಹಳ ಮುಜುಗರಪಡುತ್ತ, "ಹೆಸರು ಯಾವುದೆಂದು ಸರಿಯಾಗಿ ನೆನಪಿಗೆ ಬರುತ್ತಿಲ್ಲ, ಅದೇನೋ, ಭೂ–ತ, ಭೂ–ತ ಎಂದು ಇದ್ದ ಹಾಗೆ ಇತ್ತು" ಎಂದಳು. ಸ್ವಾಮೀಜಿ ಕೇಳಿದರು, "ಭೂತೇಶಾನಂದರು ಎಂತಲೇ?" ಎಂದು. ಮಹಿಳೆ ನಕ್ಕು, "ಹೌದು, ಭೂತೇಶಾನಂದ" ಎಂದಳು. ಮತ್ತೆ ಸ್ವಾಮೀಜಿ ಕೇಳಿದರು, "ಅವರ ನೆನಪು ಬರುತ್ತದೆಯೇ?" ಅದಕ್ಕೆ ಮಹಿಳೆ, "ಹೌದು. ನೋಡಲು ಸುಮಾರಾಗಿ ನಿಮ್ಮ ಹಾಗೆಯೇ ಇದ್ದರು" ಎಂದಳು. ಈ ಘಟನೆ ಹೇಳುತ್ತಿರುವಾಗ ಪೂಜ್ಯ ಸ್ವಾಮಿ ಭೂತೇಶಾನಂದಜಿ ಮಹಾರಾಜರು ಬಾಯಿತುಂಬ ನಕ್ಕರು.

◢ **ಭ**ಕ್ತರು ತಮ್ಮ ಗುರುಗಳಿಗೆ ಪ್ರಣಾಮ ಮಾಡಲು ಬರುವಾಗ ಅದೆಷ್ಟು ಹಾಸ್ಯ ಪ್ರಸಂಗಗಳು ಘಟಿಸುತ್ತವೆ! ಕೆಲವು ಭಕ್ತರು ಪ್ರಣಾಮ ಮಾಡುವಾಗ ಪ್ರಾರ್ಥನೆಗಳನ್ನು ಗಟ್ಟಿಯಾಗಿ ಹೇಳುತ್ತಾರೆ. ಕೆಲವರು ಒಂದೊಂದೇ ಶ್ಲೋಕಗಳನ್ನು ಹೇಳಿಕೊಳ್ಳುತ್ತ, ಪ್ರಣಾಮ ಮಾಡುತ್ತಾರೆ. ಮರೆತುಹೋದರೆ ಪುನಃ ಆರಂಭದಿಂದ ಶುರು ಮಾಡುತ್ತಾರೆ. ಇನ್ನು ಕೆಲವರು ಪಾದಗಳ ಮೇಲೆ ತಲೆ ಇಟ್ಟು ದೀರ್ಘವಾದ ಸ್ತೋತ್ರ, ಸ್ತುತಿಗಳನ್ನು ಹೇಳುತ್ತಾರೆ. ಪೂಜ್ಯ ಸ್ವಾಮಿ ತಪಸ್ಯಾನಂದಜಿ ಮಹಾರಾಜ್ ಅವರು ರಾಮಕೃಷ್ಣ ಮಹಾಸಂಘದ ಉಪಾಧ್ಯಕ್ಷರಲ್ಲಿ ಒಬ್ಬರಾಗಿದ್ದರು. ಅವರು ಚೆನ್ನೈ ಶ್ರೀರಾಮಕೃಷ್ಣ ಮಠದಲ್ಲಿ ವಾಸಿಸುತ್ತಿದ್ದರು. ಅವರಿಗೆ ಪ್ರಣಾಮ ಮಾಡಲು ಬಂದವರು, ತುಂಬ ಹೊತ್ತು ಹಾಗೆಯೇ ಸ್ತೋತ್ರ ಇತ್ಯಾದಿಗಳನ್ನು ಪಠಿಸುತ್ತ ತಲೆಬಾಗಿಸಿಕೊಂಡಿದ್ದರೆ, ಅವರು ಹೀಗೆ ಹೇಳುತ್ತಿದ್ದರಂತೆ: **"ಬೇಗ, ಬೇಗ. ಇದು ನಿದ್ದೆ ಮಾಡುವ ಸಮಯವೂ ಅಲ್ಲ, ಸ್ಥಳವೂ ಅಲ್ಲ. ಇದಲ್ಲದೆ, ನಿಮಗೆ ನೆನಪಿನ ಶಕ್ತಿಯಿದೆ ಎನ್ನುವುದನ್ನು ತೋರಿಸುವ ಸಂದರ್ಭವೂ ಇದಲ್ಲ."**

◢ ಸ್ವಾಮಿ ಭೂತೇಶಾನಂದಜಿ ಮಹಾರಾಜ್ ಈ ಸ್ವಾರಸ್ಯವಾದ ಕಥೆಯನ್ನು ಹೇಳುತ್ತಿದ್ದರು: ಒಂದು ಸಲ ಕಾಡಿನಲ್ಲಿ ಚಿಕ್ಕಪುಟ್ಟ ಪ್ರಾಣಿಗಳು ಭಯಂಕರವಾಗಿ ಕಷ್ಟಕ್ಕೀಡಾದವಂತೆ. ಅವುಗಳೆಲ್ಲ ಚಿಕ್ಕ ಚಿಕ್ಕ ಗೂಡುಗಳನ್ನು ಕಟ್ಟಿಕೊಂಡು, ಅಲ್ಲಲ್ಲಿ ವಾಸಿಸುತ್ತಿದ್ದವು. ಭೀಮದೇಹದ ಆನೆಯು ಆ ಜಾಗದಲ್ಲಿ ಓಡಾಡಿದಾಗ ಪ್ರಾಣಿಪಕ್ಷಿಗಳ ಗೂಡುಗಳೆಲ್ಲ ನೆಲಕಚ್ಚಿ ಹೋಗುತ್ತಿದ್ದವು. ಆದರೂ ಮತ್ತೆ ಗೂಡುಗಳನ್ನು ಕಟ್ಟುತ್ತಿದ್ದವು. ಮತ್ತೆ ಯಾವುದಾದರೊಂದು ಆನೆ ಆ ಕಡೆ ಬಂದಾಗ ಅದೇ ಗತಿ.

ಇದಕ್ಕಾಗಿ ಏನಾದರೂ ಒಂದು ಉಪಾಯ ಕಂಡುಹಿಡಿಯಬೇಕೆಂದು ಅ ಪುಟ್ಟಪ್ರಾಣಿಗಳು ಒಂದು ಕಡೆ ಸಭೆ ಸೇರಿದವು. ಈ ವಿಪತ್ತಿನಿಂದ ಹೇಗಾದರೂ ಪಾರಾಗಬೇಕೆಂದು ಬಹಳ ಆಲೋಚನೆ ಮಾಡಿದವು. ಆನೆಗಳಿಗೆ ಏನಾದರೂ ಒಂದು ಶಿಕ್ಷೆ ಕೊಡಲೇಬೇಕೆಂದು ಪಣತೊಟ್ಟವು. ಸಭೆಯಲ್ಲಿ ಕರಡಿ, ಜಿಂಕೆ, ನರಿ, ಕಾಡುಬೆಕ್ಕು ಇವುಗಳೆಲ್ಲ ನೆಲದ ಕೆಳಗೆ ಕುಳಿತಿದ್ದವು. ಮರದ ಮೇಲೆ ವಿವಿಧ ಜಾತಿಯ ಪಕ್ಷಿಗಳು, ಅಳಿಲು ಕುಳಿತಿದ್ದವು. ಇವು ಹೀಗೆ ಸಭೆ ನಡೆಸುತ್ತಿರುವಾಗಲೇ ಒಂದು ದೊಡ್ಡ ಆನೆ ಅಲ್ಲಿಗೆ ಬಂದೇಬಿಟ್ಟಿತು. ಎಲ್ಲ ಪ್ರಾಣಿ ಪಕ್ಷಿಗಳೂ, "ಎದ್ದೆವೋ, ಬಿದ್ದೆವೊ" ಎಂದು, ಪ್ರಾಣ ಉಳಿದರೆ ಸಾಕೆಂದು ದಿಕ್ಕಾಪಾಲಾದವು. ಮರದ ಮೇಲೆ ಇದ್ದವುಗಳು ಕೂಡ ಯದ್ವಾತದ್ವಾ ಹಾರಲಾರಂಭಿಸಿದವು. ಏತನ್ಮಧ್ಯೆ ಪುಟ್ಟದೊಂದು ಅಳಿಲು ಭಯದಿಂದ ನಡಗುತ್ತ ಧೊಪ್ಪೆಂದು ಆನೆಯ ಬೆನ್ನಮೇಲೆ ಬಿತ್ತು. ದೂರದಿಂದ ನೋಡುತ್ತಿದ್ದ ಇನ್ನೊಂದು ಅಳಿಲು ಕೂಗಿ ಹೇಳಿತು:

**"ಆ ಮೂರ್ಖ ಆನೆಗೆ ಅಲುಗಾಡಲೂ ಆಗದಂತೆ ಒತ್ತಿ ಹಿಡಿದುಕೋ!"**

# ಬುದ್ಧ ಮರಳಿ ತಾಯ್ನಾಡಿಗೆ

ಸ್ವಾಮಿ ರಾಘವೇಶಾನಂದ



**ರಾಜಕುಮಾರ ಸಿದ್ಧಾರ್ಥನು ನಿರ್ವಾಣವನ್ನು ಹೊಂದಿ ಭಗವಾನ್ ಬುದ್ಧನಾದ ಕಥನ ಎಲ್ಲರಿಗೂ ಗೊತ್ತಿರುವಂಥದ್ದು. ಆದರೆ ಬುದ್ಧನು ತನ್ನ ತಾಯ್ನಾಡಿಗೆ ಒಬ್ಬ ಭಿಕ್ಷುವಾಗಿ ವಾಪಸ್ಸು ಬಂದಾಗ ನಡೆದದ್ದೇನು? ಈ ರೋಚಕ ವೃತ್ತಾಂತವನ್ನು ಹೃದಯಂಗಮವಾಗಿ ಬಣ್ಣಿಸಿರುವ ಪೂಜ್ಯ ಸ್ವಾಮೀಜಿಯವರು ಬೆಳಗಾವಿಯ ರಾಮಕೃಷ್ಣ ಮಿಷನ್ನಿನ ಮುಖ್ಯಸ್ಥರು. ಉತ್ತಮ ವಾಗ್ಮಿಗಳು ಮತ್ತು ಸಂಘಟಕರಾಗಿರುವ ಸ್ವಾಮೀಜಿಯವರು ಹಲವಾರು ಪುಸ್ತಕಗಳನ್ನು ಬರೆದಿದ್ದಾರೆ.**

"ಸಿದ್ಧಾರ್ಥನು ಕಪಿಲವಸ್ತುವಿನತ್ತ ಬರುತ್ತಿದ್ದಾನೆ" – ಈ ವಾರ್ತೆಯನ್ನು ಕೇಳಿ ರಾಜ ಶುದ್ಧೋಧನನಿಗೆ ತನ್ನ ಕಿವಿಗಳನ್ನು ತಾನೇ ನಂಬಲಾಗಲಿಲ್ಲ. ಸಂತೋಷ, ಉದ್ವೇಗ, ಆತುರ, ಭಯ – ಎಲ್ಲವೂ ಏಕಕಾಲದಲ್ಲಿ ಅವನಿಗೆ ಆವರಿಸಿದವು. ತಾನು ಮಾಡಬೇಕಾದ ಸಾಧನೆಗಳನ್ನೆಲ್ಲ ಮುಗಿಸಿ, ಜ್ಞಾನವನ್ನು ಪಡೆದು, ತೃಪ್ತನಾಗಿ ಸಿದ್ಧಾರ್ಥನು ಮನೆಗೆ ಹಿಂದಿರುಗುತ್ತಿದ್ದಾನೆಯೇ? ಮತ್ತೆ ನಮ್ಮಲ್ಲೇ ಉಳಿದು ರಾಜನಾಗಿ ರಾಜ್ಯಪರಿಪಾಲನೆ ಮಾಡುವನೇ?! ಇಂತಹ ಒಂದು ಕಿರು ಆಸೆ ಅವನ ಮನಸ್ಸಿನಲ್ಲಿ ಅಂಕುರಿಸಿತು. ಆದರೆ, ಸುದ್ದಿ ತಂದ, ಬುದ್ಧನಿಂದಲೇ ಕಳುಹಿಸಲ್ಪಟ್ಟಿದ್ದ ಕಲುವಾಯಿಯು ತನ್ನ ಮಗನನ್ನು ವರ್ಣಿಸಿದ ರೀತಿ ಭಯವನ್ನೂ ಉಂಟುಮಾಡಿತು: "ಅವನೊಬ್ಬ ಲೋಕಗುರು, ಭಿಕ್ಷು. ತಲೆಯನ್ನು ಮುಂಡನ ಮಾಡಿಸಿಕೊಂಡು, ಕಾವಿ ಧರಿಸಿ ಭಿಕ್ಷಾಪಾತ್ರೆಯನ್ನು ಹಿಡಿದು ತನ್ನ ಮುನ್ನೂರಕ್ಕೂ ಹೆಚ್ಚು ಅನುಯಾಯಿಗಳೊಡನೆ ಬರುತ್ತಿದ್ದಾನೆ. ಅವನು ಒಂದೆಡೆ ನಿಲ್ಲುವುದಿಲ್ಲ." "ಹಾಗಾದರೆ ಅವನು ಯಾಕಾದರೂ ಬರುತ್ತಿದ್ದಾನೆಯೋ! ಇರಲಿ, ನೋಡೋಣ. ನಾನು ಅವನ ಮನಸ್ಸನ್ನು ಬದಲಿಸಬಲ್ಲೆ. ಅವನ ಹೆಂಡತಿ ಯಶೋಧರೆ ಮತ್ತು ಅವನ ಮಗ ರಾಹುಲ ಅವನ ಮನಸ್ಸನ್ನು ಬದಲಿಸಿದರೂ ಆಶ್ಚರ್ಯವಿಲ್ಲ" ಎಂದು ಶುದ್ಧೋಧನನು ಸಮಾಧಾನ ತಂದುಕೊಂಡನು.

ಕಪಿಲವಸ್ತುವಿನಿಂದ ಮೂರು ಮೈಲಿ ದೂರದಲ್ಲಿದ್ದ ನ್ಯಗ್ರೋಧ ಉದ್ಯಾನವನ್ನು ತಲುಪಿದ ಬುದ್ಧ ತನ್ನ ಅನುಯಾಯಿಗಳೊಡನೆ, ಅಲ್ಲೇ ರಾತ್ರಿಯನ್ನು ವಿಶ್ರಾಂತಿಯಲ್ಲಿ ಕಳೆದ. ಕಪಿಲವಸ್ತುವಿನಲ್ಲಿ ಸಡಗರವೋ ಸಡಗರ! ತನ್ನ ಪ್ರೀತಿಯ ರಾಜಕುಮಾರ ಸಿದ್ಧಾರ್ಥ ಹಿಂದಿರುಗುತ್ತಿದ್ದಾನೆ ಎಂಬ ವಿಷಯ ತಿಳಿದ ಊರಿನವರು, ಪಟ್ಟಣವೆಲ್ಲವನ್ನೂ ಚೆನ್ನಾಗಿ ಶೃಂಗರಿಸಿದ್ದರು. ಅವನನ್ನು ಬರಮಾಡಿಕೊಳ್ಳಲು ಹೊಸ ಬಟ್ಟೆಗಳನ್ನು ಉಟ್ಟು ರಸ್ತೆಯ ಎಲ್ಲೆಡೆ ಜನ ಗುಂಪು ಗುಂಪಾಗಿ ಸೇರಿದರು. ಆದರೆ ಅವರು ಅಲ್ಲಿ ಕಂಡಿದ್ದೇನು? ಮುನ್ನೂರು ಜನ ಭಿಕ್ಷುಗಳು ಕಾವಿ ಬಟ್ಟೆಯನ್ನು ಧರಿಸಿ, ಶಾಂತರಾಗಿ, ಮೌನವಾಗಿ ತಮ್ಮ ಭಿಕ್ಷಾಪಾತ್ರೆಗಳೊಂದಿಗೆ ಭಿಕ್ಷೆ ಬೇಡುತ್ತಿರುವ ದೃಶ್ಯ! ಇದು ಊರಿನ ಜನರಿಗೆ ಅತ್ಯಂತ ಅಚ್ಚರಿಯನ್ನುಂಟುಮಾಡಿತು!

ಇಡಿಯ ದೇಶಕ್ಕೇ ಭಿಕ್ಷೆ ಕೊಡಬಲ್ಲ ಸಿದ್ಧಾರ್ಥ ಭಿಕ್ಷೆ ಬೇಡುವುದೇ? ಈ ಸುದ್ದಿ ಅರಮನೆಯನ್ನು ತಲುಪಲು ತಡವಾಗಲಿಲ್ಲ. ಮಹಾರಾಜ ಶುದ್ಧೋಧನ ತಕ್ಷಣವೇ ತನ್ನ ಮಗನನ್ನು ಭೇಟಿಮಾಡಲು ರಥವನ್ನು ತರಲು ಆದೇಶಿಸಿದ. ಮಹಾರಾಣಿ ಯಶೋಧರಾ ಅರಮನೆಯಲ್ಲಿಯೇ ಕಾತರದಿಂದ ಕಾಯತೊಡಗಿದಳು.

ನಗರದ ಪೂರ್ವಭಾಗವನ್ನು ಪ್ರವೇಶಿಸಿದ ಮಹಾರಾಜನು,